ಸಿಗುತ್ತಿದ್ದಂತೆ ಆಕೆಯ ನಸೀಬೇ ಬದಲಾಗಿಬಿಟ್ಟಿತು. ಬೇಡಿಕೆಯ ನಟಿಯಾಗುತ್ತಿದ್ದಂತೆ ಮೂಗುದಾಣ ತಂತಾನೇ ಕಳಚಿಬಿಟ್ಟಿತು. ಕಳಚಿದ ಜಾಗದಲ್ಲಿ ಗಾಯವಾಗಿ ಆ ಗಾಯ ಪದರಪದರವಾಗಿ ಆಳಕ್ಕಿಳಿದು ಮೌನ ತನ್ನನ್ನು ಆಳುತ್ತಿದೆ ಎನ್ನಿಸುವಾಗಲೇ ಆಕೆ ತನ್ನೊಳಗಿನ ಮಾತುಗಾತಿಯನ್ನು ಎಚ್ಚರಿಸಿಕೊಂಡಳು. ತಾ ಕಂಡ ಅಪರೂಪದ ಮನುಷ್ಯರು, ಘಟನೆಗಳು, ಸಂಗತಿಗಳನ್ನು ಒಟ್ಟೈಸಿ ಕಥೆಯಾಗಿಸುತ್ತ ಹೊರಟಳು. ಎಷ್ಟೋ ಸಲ ಸೆಟ್ಟಿನಲ್ಲಿರುವ ನಿರ್ದೇಶಕರಿಗೆ ಈಕೆಯ ಕಥೆಗಳಿಂದಲೇ ದೃಶ್ಯಗಳಿಗೆ ಇಂಬು ಸಿಕ್ಕಿದ್ದಿದೆ; ಈಕೆಯ ನಿರೂಪಣಾ ಶೈಲಿಯಿಂದಲೇ ಕಲಾ ನಿರ್ದೇಶಕರ ಕ್ಯಾನ್ವಾಸ್ ಹಿಗ್ಗಿದ್ದಿದೆ; ಇನ್ನು ಸ್ಕ್ರಿಪ್ಟ್ ರೈಟರಿಗಂತೂ ಅಂಗೈಯ್ಯೊಳಗೇ ಕಂಟೆಂಟ್ ಜೀವ ತಳೆದಿದ್ದಿದೆ; ಆದ್ದರಿಂದಲೇ ಶೂಟಿಂಗ್‌ನ ಲಂಚ್ ಬ್ರೇಕ್, ಸ್ನ್ಯಾಕ್ಸ್ ಬ್ರೇಕ್‌ನಲ್ಲಿ ಸೆಟ್‌ನಲ್ಲಿದ್ದವರೆಲ್ಲರೂ ಇರುವೆಯಂತೆ ಗುಂಪುಗೂಡಿದರೆ, ಈಕೆ ಸಕ್ಕರೆಯ ದೊಡ್ಡ ಹರಳಿನಂತೆ ಕಂಗೊಳಿಸತೊಡಗುತ್ತಾಳೆ.

ನನಗೂ ಕಥೆಯೆಂದರೆ ಪ್ರಾಣವೇ. ಈಕೆ ಹೇಳುವುದನ್ನು ನಾನು ಕೂಡ ಲಕ್ಷ್ಯಕೊಟ್ಟು ಕೇಳಿಸಿಕೊಳ್ಳುತ್ತೇನೆ. ಅವರೆಲ್ಲರೊಂದಿಗೆ ಕುಳಿತುಕೊಂಡಲ್ಲ. ಅವರ ಮತ್ತು ನನ್ನ ಮಧ್ಯೆ ಗೋಡೆಯಿದ್ದು, ಅವರು ಹೊರಗೋಡೆಗೆ ಅಂಟಿ ಕುಳಿತುಕೊಳ್ಳುತ್ತಾರೆ. ನಾನು ಒಳಗೋಡೆಯ ಪುಟ್ಟ ಕಿಟಕಿಯ ಬಳಿ ಕುಳಿತುಕೊಳ್ಳುತ್ತೇನೆ. ನನ್ನ ಭುಜಕ್ಕೆ ಎರಡು ಎಕ್ಸ್ಟ್ರಾ ಕೈಗಳನ್ನು ಅಂಟಿಸಿಕೊಂಡು ಕೊತಕೊತನೆ ಕುದಿಯುವ ಎಣ್ಣೆಯಲ್ಲಿ ಪೂರಿಯನ್ನೋ, ಬೋಂಡಾಗಳನ್ನು ಬಿಡುತ್ತ ಈಕೆ ಸೃಷ್ಟಿಸುವ ಲೋಕದಲ್ಲಿ ಕಳೆದುಹೋಗುತ್ತೇನೆ. ಹೀಗೆ ಕಳೆದುಹೋಗುವುದನ್ನು ರೂಢಿಸಿಕೊಳ್ಳದಿದ್ದರೆ ಇಷ್ಟೊತ್ತಿಗೆ ನನ್ನ ಬದುಕು ಈರುಳ್ಳಿ ಸಿಪ್ಪೆಯಂತಾಗುತ್ತಿತ್ತು. ನನ್ನ ಪಕ್ಕದಲ್ಲಿ ಬಿದ್ದುಕೊಂಡಿದೆಯಲ್ಲ ಈ ಆಲೂಗಡ್ಡೆ ಮೂಟೆ ಇದನ್ನೊಂದು ಬಿಟ್ಟು ಈ ಲೊಕೇಶನ್‌ನಲ್ಲಿರುವ ನಾಯಿಬೆಕ್ಕುಗಳು ಕೂಡ ಈಕೆಯ ಕಟ್ಟಾ ಅಭಿಮಾನಿಗಳು. ಈಕೆ ತಾನೇ ಪಾತ್ರವಾಗಿ ಹರಿಯುವ ರೀತಿ ಇದೆಯಲ್ಲ, ಅದನ್ನು ಅನುಭವಿಸಲು ಕಿವಿಗಳಿದ್ದರೆ ಸಾಕು. ಉಳಿದೆಲ್ಲವೂ ತಾನಾಗಿಯೇ ಕಣ್ಮುಂದೆ...

'ಮಾಬಳ್ಯಾ, ಕೈ ಕಟಗೊಂಡಕ್ಯಾಸ ನಿಂತ್ರ ಹೆಂಗಂತ. ನೋಡಿಲ್ಲೇ ಹಿಂಗ ಗಳಾಗಳಾ ಮಾಡ್ಕೊಂತಿದ್ರಷ್ಟ ಉಸಲ್ ಬಿಗಿ ಹಿಡ್ಯೂದು. ಬಳ್ಳು ಹಿಂದ ಮುಂದ ಆಡಿಕ್ಯಾರ ನೂದಂಗಾಕ್ಕಾವು. ನಡಬರಕ ರಟ್ಟಿ ಸೋಲತೇತಿ. ಜಷ್ರ್ ಕಡ್ತಾ ಕೈಬಿಟ್ರ್ಯೋ ಪೈಲಾದಿಂದ ಗಳಾಗಳಾ. ಇಲ್ನೋಡದ ಉಸಲ ಹಿಡೀಲಿಲ್ಲಾ, ಹಿಡದ ಉಕ್ಕಲಿಲ್ಲಾ ಅಂದ್ರ ಹಿಂಗ ಇದರ್ಲೇ ಹೌದೋ ಅಲ್ಲೋ ತುದೀಗೇ ಆಡಸು. ಉಸಲ ಗಪ್ಪನ ನಿಂತಂಗ ಆಕ್ಕತೀ. ಇನ್ನ ಕುಂತ ಧರ್ತೀಗೇ ನಿನ್ನ ಮೀನಗಂಡ ಚಟ್ನ ಹಿಡದ್ದಂಗನೂ ಆಕ್ಕಾವು. ಆದರ ಯಾವಾಗ ಉಸಲ ಒಮ್ಮಿಂದೊಮ್ಮೆ ಹಿಂದಮಾರ್ಯಾರ್ಣಾ ಧಡಕ್ಕನ ಇಳದ್ದಂಗಾಗಿ ಮುಂದಮಾರ್ಯಾರ್ಣಾ ಒಳಗಿಂದ ವಜ್ಞನ್ ಹಿಡದಂಗ ಆಕ್ಕೇತೋ, ಆಗನ ಪಟ್ನ ಕಡ್ಡಿ ಗೀರಿ ಅದರ ಮಕಕ್ಕ ಹಿಡದಬಿಡು, ದ.. ನೋಡದ ಹೆಂಗ ಭಗ್ಗನ! ಅಯ್ಯ ಹಂಗ್ಯಾಕ ಜಿಗದ ಕುಂತಿ? ನೋಡಾ ಬಂದ್ ಮಾಡ್ತೇನಿ. ನೀ ಮತ್ ಚಾಲೂ ಮಾಡುವಂತೀ. ಹಿಡೀ ಈ ಸ್ಟೋ ಪಿನ್, ಹೊಡೀ ಪಂಪ್.' ಕಳೆದ ತಿಂಗಳು ಲಗ್ನ ಮಾಡಿಕೊಂಡು ಅಪ್ಪನಿಂದ ಹೊರಹಾಕಿಸಿಕೊಂಡು ಚಾಳಿನಲ್ಲಿ ಹೊಸದಾಗಿ ಬಾಡಿಗೆ ಮನೆಹಿಡಿದು ಸಂಸಾರ ಶುರುಮಾಡಿದ್ದ ಮಾಬಳ್ಯಾನಿಗೆ ಸುಲೂತಾಯಿ ಹೀಗೆ ದಿನಾ ಬೆಳಗಾದರೆ ಸ್ಟೋವಪಾಠ ಶುರು ಮಾಡುತ್ತಿದ್ದಳು.

'ತಾಯೀ... ನನ ಜೀಂವಾ ತಿನಬ್ಯಾಡವಾ, ನಾ ಅಣ್ಣಪ್ಪನ ಅಂಗಡ್ಯಾಗ ಮಿಸಳ್ ಪಾವ್ ತಿನ್ಕೊಂಡಿರತೇನಂತ' ಮಾಬಳ್ಯಾ ಉರುಫ್ ಮಾಬಳೇಶ್ವರ ಸುಲೂತಾಯಿಗೆ ಬೆನ್ನುಹಾಕಿ ಕುಳಿತ. ಕಣ್ಣಲ್ಲಿ ಕಣ್ಣಿಟ್ಟು ಹೇಳಿದರಾದರೂ ಅವನಿಗೆ ನಾಟಬಹುದೆಂದು ಎದ್ದು ಅವನೆಡೆ ಬಾಗಿದಳು. ಅವ ಕಣ್ಣಿಗೆ ಕಣ್ಣೂ ಕೊಡದೇ, 'ರಾತ್ರೆಲ್ಲಾ ಕುಂತು ಒಲಿ ಹಾಕಿದ್ನ್ಯಾ, ಪತ್ರಾವಳಿ ಹಚ್ಚಿದ್ನ್ಯಾ, ಚೂಡಾ ಹಚ್ಚಿದ್ನ್ಯಾ, ಬಾಜೂಮನ್ಯಾಕೀಗೆ ಬಿಡ್ಡಿ ತಂದುಕೊಟ್ನ್ಯಾ, ಎದರಮನಿ ಮುದೋಡ್ಯಾಗ ಬೀಡಿಕಟ್ ಬಡದ್ನ್ಯಾ, ಕುಂಟಗ ನಾಶೀಪುಡಿ, ಕೆಳಗಿನ ಮನ್ಯಾಕೀಗೆ ಕದ್ದಲೇ ಬ್ರಾ, ಕೂಶಿನ ಮುಕಳ್ಯಾಗ ಹುಣಸೀಕಡ್ಡಿ ಆಡಿಸಿ ಬಂದ್ನ್ಯಾ... ನಿನ್ನಂಗ ಇಂಥಾ ಊರ ಉಸಾಬರಿ ಮಾಡಾಕ ನನಗ ಆಗೂದಿಲ್ಲ. ನಾ ನೀ ಅಲ್ಲ. ನಾನು ನಾನ' ಎದ್ದು ನಿಂತು ಎದೆಯುಬ್ಬಿಸಿದ.

'ನಡೀಯಾ ಜೋಕಮಾರಾ ನಿನ್ನಂಥಾ ಶಂಬರ್ ಮಂದೀನ ಕಂಡೇನಿ.' ಸೊಂಟಕ್ಕೆ ಕಟ್ಟಿದ ಸೆರಗಿನ